ಅಸಲು ದಾವೆ ಸಂಖ್ಯೆ. 378/2024

ಪಿ.ಡಬ್ಲ್ಯೂಃ1

ದಿನಾಂಕಃ **23.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ವಾದಿಪರ ಶ್ರೀ. ಎಸ್.ಸಿ.ಎನ್. ವಕೀಲರಿಂದಃ-

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ ತಿಳಿದು, ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ಆರ್.ಆರ್. ಇಂಡೆಕ್ಸ್ ನ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-1 ಎಂದೂ, ದಿನಾಂಕಃ 06.09.1980 ರ ಕ್ರಯ ಪತ್ರದ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-2 ಎಂದೂ, ದಿನಾಂಕಃ 07.08.1972 ರ ಕ್ರಯ ಪತ್ರದ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-3 ಎಂದೂ, ಪಟ್ಟಾ ಪುಸ್ತಕವನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-4 ಎಂದೂ, ಮೂರು ಕೈಬರಹದ ಪಹಣಿ ಪತ್ರಿಕಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿಪಿ-5 ರಿಂದ 7 ಎಂದೂ, ಸರ್ವೆ ನಂ. 69/ಪಿ1 ರ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-8 ಎಂದೂ, ಒಂದು ಎಂ.ಆರ್. ಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿಪಿ-9 ಎಂದೂ, ಏಳು ಪುಟಗಳ ಆರ್.ಟಿ.ಸಿ.ಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-10 ಎಂದೂ, ಒಂದು ಎಂ.ಆರ್. ಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿಪಿ-11 ಎಂದೂ, 13 ಪುಟಗಳ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿಪಿ-12 ಎಂದೂ, ಅಸಲು ದಾವಾ ಸಂಖ್ಯೆಃ 569/2021 ರ ಆದೇಶ ಪುಟಗಳ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-13 ಎಂದೂ, ವಾದಪತ್ರದ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-14 ಎಂದೂ, ಪ್ರತಿವಾದಪತ್ರದ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-15 ಎಂದೂ ಮಧ್ಯಂತರ ಅರ್ಜಿ 1 ರಲ್ಲಿ ಮಾಡಿರುವ ಆದೇಶದ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-16 ಎಂದೂ, ಮಧ್ಯಂತರ ಅರ್ಜಿ 1 ರ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-17 ಎಂದೂ, ತಕರಾರಿನ ದೃಡೀಕೃತಪ್ರತಿಯನ್ನು ಹಾಜರು ಪಡಿಸಿದ್ದು, ನಿಪಿ-18 ಎಂದೂ, ಮಧ್ಯಂತರ ಅರ್ಜಿ 2 ರ ದೃಡೀಕೃತ ಪ್ರತಿಯನ್ನು

ಹಾಜರು ಪಡಿಸಿದ್ದು, ಅದನ್ನು ನಿಪಿ-19 ಎಂದೂ, ಕಂದಾಯ ಪಾವತಿ ರಶೀದಿಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿಪಿ-20 ರಿಂದ 23 ಎಂದೂ, ಮೂರು ಭಾವಚಿತ್ರಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿಪಿ-24 ರಿಂದ 26 ಎಂದೂ, ಸಿಡಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-27 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು ಕಡೂರು.